ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	402
2	ಸದಸ್ಯರ ಹೆಸರು	ಶ್ರೀ. ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3	ಉತ್ತರಿಸುವ ದಿನಾಂಕ	18-02-2022
4	ಉತ್ತರಿಸುವವರು	ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿರುವ ರೇಷ್ಮೆ ಗೂಡು ಮಾರುಕಟ್ಟೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಲ್ಲಿ ರೇಷ್ಮೆ ಗೂಡಿನ ವಹಿವಾಟು ನಡೆಸಲು 55 ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಿವೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.
ಆ	ಸದರಿ ಮಾರುಕಟ್ಟೆಗಳಲ್ಲಿ ರೇಷ್ಮೆ ಬೆಳೆಗಾರರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ;	ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.
ಇ	ಸದರಿ ಮಾರುಕಟ್ಟೆಗಳಲ್ಲಿರುವ ಮೂಲಭೂತ ಸೌಕರ್ಯಗಳೇನು;	ಮಾರುಕಟ್ಟೆಗಳಲ್ಲಿ ವಿದ್ಯುತ್ ಕೊರತೆ ನೀಗಿಸಲು ಜನರೇಟರ್, ಸೋಲಾರ್ ಪವರ್ ಪ್ಲಾಂಟ್, ರೇಷ್ಮೆ ಬೆಳೆಗಾರರಿಗೆ ಗೂಡು ಒಳದಾಖಲಾಗಿ ಮಾಡಲು ಗಣಕೀಕರಣ ಸೌಲಭ್ಯ ಕಲ್ಪಿಸಲಾಗಿದೆ. ಎಲೆಕ್ಟ್ರಾನಿಕ್ ತೂಕ ಯಂತ್ರ, ಸಿ.ಸಿ.ಟಿ.ವಿ, ನೋಟು ಎಣಿಕೆ ಯಂತ್ರ, ಬಿನ್ಸ್, ಟ್ರ್ಯಾಲಿ , ಕ್ರೇಟ್ಸ್, ಧ್ವನಿ ವರ್ಧಕ, ಸೂಚನಾ ಫಲಕ, ಕುಡಿಯುವ ನೀರಿನ ಸೌಲಭ್ಯ, ಮಹಿಳೆಯರಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ, ಆಸನದ ವ್ಯವಸ್ಥೆ, ಶೌಚಾಲಯ ಮುಂತಾದ ಅವಶ್ಯಕ ಮೂಲಭೂತ ಸೌಲಭ್ಯಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
ಈ	ಮಾರುಕಟ್ಟೆಯಲ್ಲಿ ರೇಷ್ಮೆ ಗೂಡಿನ ಹರಾಜಿನಲ್ಲಿ ಮತ್ತು ತೂಕ ಮಾಡುವಲ್ಲಿ ಪಾರದರ್ಶಕತೆ ಇದೆಯೇ ? (ವಿವರ ನೀಡುವುದು)	ರೇಷ್ಮೆ ಗೂಡು ವಹಿವಾಟಿನಲ್ಲಿ ಪಾರದರ್ಶಕತೆ ತರಲು ಮತ್ತು ಸ್ಪರ್ಧಾತ್ಮಕ ಧಾರಣೆಗಾಗಿ 12 ಮಾರುಕಟ್ಟೆಗಳಲ್ಲಿ ಇ-ಹರಾಜು ವಿಧಾನವನ್ನು ಅಳವಡಿಸಲಾಗಿದೆ. ರೇಷ್ಮೆ ಗೂಡಿನ ತೂಕದಲ್ಲಿ ಪಾರದರ್ಶಕತೆಗಾಗಿ ಇ-ಹರಾಜು ವ್ಯವಸ್ಥೆಗೆ ಎಲೆಕ್ಟ್ರಾನಿಕ್ ತೂಕ (e-weighment) ಯಂತ್ರಗಳನ್ನು ಅನುಸಂಧಾನಗೊಳಿಸಲಾಗಿದೆ. ರೇಷ್ಮೆ ಬೆಳೆಗಾರರಿಗೆ ಗೂಡಿನ ಮೌಲ್ಯವನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲು ಇ-ಹಣ (e-payment) ಪಾವತಿ ಪದ್ಧತಿಯನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಸಹಯೋಗದಲ್ಲಿ ಕ್ರಮವಹಿಸಲಾಗುತ್ತಿದ್ದು, ಶಿಡ್ಲಘಟ್ಟ, ವಿಜಯಪುರ, ಕೋಲಾರ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇ-ಹಣ ಪಾವತಿ ಜಾರಿಗೊಳಿಸಲಾಗಿದೆ. ಕೊಳ್ಳೆಗಾಲ, ಕನಕಪುರ, ಚನ್ನಪಟ್ಟಣ, ಮೈಸೂರು ಮತ್ತು ಚಿಕ್ಕಬಳ್ಳಾಪುರ ಮಾರುಕಟ್ಟೆಗಳಲ್ಲಿ ಭಾಗಶಃ ಇ-ಹಣ ಪಾವತಿ ಮಾಡಲಾಗುತ್ತಿದ್ದು, ಉಳಿದ ಮಾರುಕಟ್ಟೆಗಳಲ್ಲಿ ಶೀಘ್ರದಲ್ಲಿಯೇ ಇ-ಹಣ ಪಾವತಿ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗುವುದು.

ಸಂಖ್ಯೆ:ರೇಷ್ಮೆ 24 ರೇಕೃವಿ 2022

(ಡಾ. ನಾರಾಯಣ ಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು

ವಿಧಾನ ಪರಿಷತ್ ಸಂಖ್ಯೆ 40.2ಕ್ಕೆ ಅನುಬಂಧ				
ರಾಜ್ಯದಲ್ಲಿರುವ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ವಿವರಗಳು				
ಕ್ರ.ಸಂ	ಜಿಲ್ಲೆ	ತಾಲ್ಲೂಕು	ಕ್ರ.ಸಂ	ಮಾರುಕಟ್ಟೆಯ ಹೆಸರು
ವಾಣಿಜ್ಯ ರೇಷ್ಮೆ ಗೂಡಿನ ಮಾರುಕಟ್ಟೆಗಳು				
1	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	1	ವಿಜಯಪುರ
2	ಬಾಗಲಕೋಟೆ	ಮುಧೋಳ	2	ಮುಧೋಳ
		ಹುನಗುಂದ	3	ಇಳಕಲ್
3	ಬೆಳಗಾಂ	ಅಥಣಿ	4	ಅಥಣಿ
		ಗೋಕಾಕ್	5	ಗೋಕಾಕ್
4	ಬಳ್ಳಾರಿ	ಕೂಡ್ಲಿಗಿ	6	ಕೂಡ್ಲಿಗಿ
5	ಬೀದರ್	ಹುಮ್ನಾಬಾದ್	7	ಹುಮ್ನಾಬಾದ್
6	ಬಿಜಾಪುರ	ಬಿಜಾಪುರ	8	ಬಿಜಾಪುರ
7	ಚಾಮರಾಜನಗರ	ಚಾಮರಾಜನಗರ	9	ಚಾಮರಾಜನಗರ
		ಚಾಮರಾಜನಗರ	10	ಸಂತೆಮರಹಳ್ಳಿ
		ಚಾಮರಾಜನಗರ	12	ಹರವೆ
		ಕೊಳ್ಳೇಗಾಲ	13	ಕೊಳ್ಳೇಗಾಲ
		ಕೊಳ್ಳೇಗಾಲ	14	ಹನೂರು
8	ಮೈಸೂರು	ಮೈಸೂರು	11	ಮೈಸೂರು
		ತಿ. ನರಸೀಪುರ	30	ತಿ. ನರಸೀಪುರ
9	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	15	ಚಿಕ್ಕಬಳ್ಳಾಪುರ
		ಚಿಂತಾಮಣಿ	16	ಚಿಂತಾಮಣಿ
		ಶಿಡ್ಲಘಟ್ಟ	17	ಶಿಡ್ಲಘಟ್ಟ
		ಶಿಡ್ಲಘಟ್ಟ	18	ಹೆಚ್. ಕ್ರಾಸ್
10	ದಕ್ಷಿಣ ಕನ್ನಡ	ಬಂಟ್ವಾಳ	19	ಬಿ.ಸಿ.ರೋಡ್
11	ದಾವಣಗೆರೆ	ದಾವಣಗೆರೆ	20	ದಾವಣಗೆರೆ
12	ಧಾರವಾಡ	ಧಾರವಾಡ	21	ರಾಯಾಪುರ
13	ಗದಗ	ಶಿರಹಟ್ಟಿ	22	ಶಿರಹಟ್ಟಿ
14	ಗುಲ್ಬರ್ಗ	ಗುಲ್ಬರ್ಗ	23	ಗುಲ್ಬರ್ಗ
		ಜೇವರ್ಗಿ	24	ಜೇವರ್ಗಿ
15	ಕೋಲಾರ	ಕೋಲಾರ	25	ಕೋಲಾರ
		ಕೋಲಾರ	26	ಕ್ಯಾಲನೂರು
		ಶ್ರೀನಿವಾಸಪುರ	27	ಶ್ರೀನಿವಾಸಪುರ
		ಮುಳಬಾಗಿಲು	28	ಮುಳಬಾಗಿಲು
16	ಮಂಡ್ಯ	ಮಳವಳ್ಳಿ	29	ಮಳವಳ್ಳಿ
17	ರಾಮನಗರ	ರಾಮನಗರ	31	ರಾಮನಗರ
		ಚನ್ನಪಟ್ಟಣ	32	ಚನ್ನಪಟ್ಟಣ
		ಕನಕಪುರ	33	ಕನಕಪುರ
18	ರಾಯಚೂರು	ಲಿಂಗಸೂಗೂರು	34	ಲಿಂಗಸೂಗೂರು
19	ಹಾವೇರಿ	ಹಾವೇರಿ	35	ಹಾವೇರಿ
ದ್ವಿತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು				
	ಜಿಲ್ಲೆ	ತಾಲ್ಲೂಕು		ಮಾರುಕಟ್ಟೆಯ ಹೆಸರು
1	ಬೆಂಗಳೂರು ನಗರ	ಬೆಂಗಳೂರು ಉತ್ತರ	36	ಬೆಂಗಳೂರು
		ಆನೇಕಲ್	37	ಸರ್ಜಾಪುರ
		ಆನೇಕಲ್	38	ಅತ್ತಿಬೆಲೆ
2	ಬೆಳಗಾಂ	ಬೆಳಗಾಂ	39	ಬೆಳಗಾಂ
3	ಹಾಸನ	ಹಾಸನ	40	ಹಾಸನ
4	ಕೊಡಗು	ಸೋಮವಾರಪೇಟೆ	41	ಕುಶಾಲನಗರ
5	ಮಂಡ್ಯ	ಕೆ.ಆರ್.ಪೇಟೆ	42	ಕೆ.ಆರ್.ಪೇಟೆ
6	ಶಿವಮೊಗ್ಗ	ಶಿವಮೊಗ್ಗ	43	ಶಿವಮೊಗ್ಗ
7	ತುಮಕೂರು	ತುಮಕೂರು	44	ತುಮಕೂರು
8	ಉತ್ತರ ಕನ್ನಡ	ಶಿರಸಿ	45	ಶಿರಸಿ
ಮೈಸೂರು ತಳಿ ಬಿತ್ತನೆ ರೇಷ್ಮೆ ಗೂಡಿನ ಮಾರುಕಟ್ಟೆಗಳು				
1	ರಾಮನಗರ	ಮಾಗಡಿ	46	ಮಾಗಡಿ
		ಮಾಗಡಿ	47	ಕುದೂರು
		ಮಾಗಡಿ	48	ಸೋಲೂರು
		ಮಾಗಡಿ	49	ವೀರೇಗೌಡನದೊಡ್ಡಿ
2	ತುಮಕೂರು	ತುಮಕೂರು	50	ಹೆಬ್ಬೂರು
		ಕುಣಿಗಲ್	51	ಕುಣಿಗಲ್
		ಕುಣಿಗಲ್	52	ಸಂತೆಮಾವತ್ತೂರು
		ಕುಣಿಗಲ್	53	ಕೆಂಪನಹಳ್ಳಿ
		ಕುಣಿಗಲ್	54	ಹುಲಿಯೂರುದುರ್ಗ
		ಕುಣಿಗಲ್	55	ಚೌಡನಕುಪ್ಪೆ